

ಗುದ್ದಲಿ ಸಹಾಯದಿಂದ '\/' ಆಕಾರದ ಗುಂಡಿ ತೆಗೆಯುತ್ತಿರುವುದು

- ಸಂಗ್ರಹಿಸಿದ ಮಾದರಿಯನ್ನು ಒಂದು ಕಡೆ ಶುಭ್ರವಾದ ಪ್ಲಾಸ್ಟಿಕ್ ಹಾಳೆಯ ಮೇಲೆ ಹರಡಿ ಮಿಶ್ರಣ ಮಾಡುವಾಗ ಕಲ್ಲು, ಬೇರು, ಕೂಳೆ ಇತ್ಯಾದಿಗಳು ಇದ್ದಲ್ಲಿ ಆರಿಸಿ ತೆಗೆದು ಹಾಕಬೇಕು. ಹೀಗೆ ಸಂಗ್ರಹಿಸಿದ ಮಾದರಿ ತೂಕವು ಸುಮಾರು 8–10 ಕೆ.ಜಿ. ಗಳಿರುವುದು ಆದರೆ ಮಣ್ಣು ಪರೀಕ್ಷೆಗೆ 500 ಗ್ರಾಂ ಮಣ್ಣು ಸಾಕಾಗುವುದರಿಂದ, ಚತುರ್ವಿಂಗಡಣಾ ಪದ್ಧತಿಯನ್ನು ಅಳವಡಿಸಿಕೊಂಡು ಒಟ್ಟುಗೂಡಿಸಿದ ಮಾದರಿಯನ್ನು 500 ಗ್ರಾಂ.ಗೆ ಇಳಿಸಬಹುದು.

### ಚತುರ್ವಿಂಗಡಣಾ ಪದ್ಧತಿ

- ಮಣ್ಣನ್ನು ಗುಡ್ಡೆ ಮಾಡಿ ನಂತರ ವೃತ್ತಾಕಾರವಾಗಿ ಹರಡಬೇಕು. ಚಿತ್ರದಲ್ಲಿ ತೋರಿಸಿದಂತೆ ಮಣ್ಣನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ವಿರುದ್ಧ ದಿಕ್ಕಿನಲ್ಲಿರುವ ಎರಡು ಭಾಗಗಳನ್ನು ಆಯ್ಕೆ ಮಾಡಿ, ಹೀಗೆ ನಾಲ್ಕರಿಂದ ಐದು ಬಾರಿ ಪುನಾರಾವರ್ತಿಸಬೇಕು. ಕೊನೆಯಲ್ಲಿ 500 ಗ್ರಾಂ ನಷ್ಟು ಮಣ್ಣನ್ನು ನೆರಳಲ್ಲಿ ಒಣಗಿಸಿ ಪ್ಲಾಸ್ಟಿಕ್ ಅಥವಾ ಬಟ್ಟೆಯ ಚೀಲದಲ್ಲಿ ಶೇಖರಿಸಬೇಕು.
- ಸಂಗ್ರಹಿಸಿದ ಮಾದರಿಯನ್ನು ರೈತರ ಹೆಸರು, ಊರು, ಮಾದರಿ ಸಂಗ್ರಹಿಸಿದ ಸ್ಥಳ, ತಾಲ್ಲೂಕು, ಸರ್ವೆ ನಂ. ದಿನಾಂಕ, ಆಳ, ಬೆಳೆಯ ವಯಸ್ಸು, ಬೆಳೆಯ ತಳಿ, ಕಳೆದ ವರ್ಷಗಳಲ್ಲಿ ಹಾಕಿದ ಗೊಬ್ಬರದ ವಿವಿರವನ್ನು ಚೀಟಿಯಲ್ಲಿ ಬರೆದು ಮಣ್ಣು ಪರೀಕ್ಷಾ ಪ್ರಯೋಗಾಲಯಕ್ಕೆ ಕಳುಹಿಸಿಕೊಡಬೇಕು.





ಚತುರ್ವಿಂಗಡಣಾ ಪದ್ಧತಿ

### ಮಣ್ಣು ಮಾದರಿ ಸಂಗ್ರಹಿಸುವಾಗ ಗಮನಿಸ ಬೇಕಾದ ಕ್ರಮಗಳು

- ಗೊಬ್ಬರದ ಗುಂಡಿ, ರಸ್ತೆ, ಕಾಲುವೆ, ಬದುಗಳ ಪಕ್ಕ, ಮರದ ಕೆಳಗೆ ಮಾದರಿಯನ್ನು ತೆಗೆಯಬಾರದು
- ಮಣ್ಣಿಗೆ ಗೊಬ್ಬರ ಸೇರಿಸಿದ ನಂತರ ಮಾದರಿಯನ್ನು ತೆಗೆಯಬಾರದು
- ಮಾದರಿಯನ್ನು ರಸಗೊಬ್ಬರದ ಚೀಲಗಳಲ್ಲಿ ಸಂಗ್ರಹಿಸಬಾರದು
- ಮಣ್ಣು ಮಾದರಿಯಲ್ಲಿ ತೇವಾಂಶ ಇಲ್ಲದೆ ನೆರಳಿನಲ್ಲಿ ಒಣಗಿಸುವುದು
- ಧಾನ್ಯ ಬೆಳೆಗಳು, ತರಕಾರಿ ಬೆಳೆಗಳು, ಹೂವಿನ ಬೆಳೆ, ಔಷಧೀಯ ಹಾಗೂ ಸುಗಂಧ ಬೆಳೆಗಳಲ್ಲಿ ಬೆಳೆಯ ಸಾಲುಗಳ ಮಧ್ಯ ಭಾಗದಲ್ಲಿ ಮತ್ತು ಹಣ್ಣಿನ, ತೋಟದ ಬೆಳೆಗಳಾದಲ್ಲಿ ಮರದ ಕಾಂಡ ಮತ್ತು ಮರದ ಹೊರ ಪರಧಿಯ ಮಧ್ಯ ಭಾಗದಲ್ಲಿ ಮಾದರಿಯನ್ನು ತೆಗೆಯುವುದು
- ಲಘು ಪೋಷಕಾಂಶಗಳ ವಿಶ್ಲೇಷಣೆಗಾಗಿ ಮಣ್ಣು ಮಾದರಿಗಳನ್ನು ಸಂಗ್ರಹಿಸುವಾಗ ಲೋಹಗಳ ಕಲಬೆರಕೆ ಆಗದಂತೆ ಪ್ಲಾಸ್ಟಿಕ್ ಅಥವಾ ಮರದ ಉಪಕರಣಗಳನ್ನು ಬಳಸುವುದು ಸೂಕ್ತ


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಕೃಷಿ ವಿಜ್ಞಾನ ಕೇಂದ್ರ
ವಿ. ಸಿ. ಫಾರಂ, ಮಂಡ್ಯ– 571 405,
ದೂ: 08232-277456
Email: kvkmandya@gmail.com



ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ವಿ. ಸಿ. ಫಾರಂ, ಮಂಡ್ಯ– 571 405


# ಮಣ್ಣು ಪರೀಕ್ಷೆ ಮಹತ್ವ ಮತ್ತು ಮಣ್ಣು ಮಾದರಿ ತೆಗೆಯುವ ವಿಧಾನ




ಅತೀಫ ಮುನವರಿ
ರೂಪಶ್ರೀ. ಡಿ.ಎಚ್.
ನರೇಶ್. ಎನ್.ಟಿ.
ಪವಿತ್ರ. ಎಸ್.
ಜಯಶಂಕರ್ ಹೆಚ್.ಪಿ.


2019–20